ಆಫೀಸರ್– ಕ್ಲಾರ್ಕ್ ಭೇದವು ಮಾಯವಾಗಿ, ರಮಣ್ 'ರಮ್' ಆಗಿ ಚಂಚಲೆ 'ಚಂ' ಆಗಿ ಒಂದು ದಿನ ಜತೆಯಾಗಿ ಸಿನಿಮಾಕ್ಕೆ ಹೋಗುವಷ್ಟೂ ಮುಂದರಿಯಿತು; ಸಿನಿಮಾದ ಕತೆ ನಿಜವಾಗುವುದೂ ಸಾಧ್ಯವೆಂದು ತೋರುವಲ್ಲಿಗೆ ಮುಟ್ಟಿತು.

ಆದರೆ ಪಾಂಡುರಂಗರಾಯನಿಗೆ ವಿಷಯ ತಿಳಿದು ಮಗಳ ಮೇಲೆ ರೇಗಿ 'ಏನೇ ಅದು ಪೀಯೋನು ಮಗನೊಡನೆ ಸಹವಾಸ?' ಎಂದು ಗದರಿಸಿದಾಗ ಸ್ಯಾನಿಟರಿ ಇನ್ಸ್‌ಪೆಕ್ಟರನನ್ನೇ ಶುದ್ಧೀಕರಿಸುವ ಸವಾಲೆಂಬಂತೆ, 'ನಾನವನನ್ನೆ ಮದುವೆ ಮಾಡ್ಕೊತೀನಿ' ಎಂದು ಚಂಚಲೆಯೆಂದುದನ್ನು ಕೇಳಿ ಪಾಂಡುರಂಗರಾಯ, ಮುರಿದುಬಿದ್ದ ಮದುವೆಯ ಕತೆಯನ್ನು ನೆನೆದು, ಹೊಸ ವರಗಳು ಚಂಚಲೆಯ ಹೆಸರೆತ್ತಿದೊಡನೆ ಕೋಡು. ಕಿವಿ ಮತ್ತು ಬಾಲಗಳನ್ನೆತ್ತಿ ಬೆರಗು ತೋರುತ್ತಿರುವುದನ್ನು ನೆನೆದು, ಸುಮ್ಮನಾದ. ನಾಲ್ಕು ದಿನ ಕಳೆದ ಮೇಲೆ ಮಗಳ ನಿರ್ಧಾರಕ್ಕೆ ತಲೆಬಾಗಿದ್ದಲ್ಲದೆ ವೆಂಕಟರಮಣನ ಪರ್ಸನಾಲಿಟಿಯನ್ನು ನೋಡಿ ಮೆಚ್ಚಿ, ಅವನನ್ನು ಆಫೀಸರ್‌ಗಿರಿಗೆ ಏರಿಸುವ ಎಲ್ಲಾ ಏರ್ಪಾಡನ್ನೂ ಒಳಗಿಂದೊಳಗೇ ಮಾಡಿದ. ಪೀಯೋನು ದಾಸಪ್ಪನ ಪಕ್ಕದಲ್ಲಿ ನಿಂತು ಸ್ಯಾನಿಟರಿ ಇನ್ಸ್‌ಪೆಕ್ಟರ್ ಪಾಂಡುರಂಗರಾಯ ಮಗಳು ಮತ್ತು ಅಳಿಯನ ಮೇಲೆ ಅಕ್ಕಿಕಾಳು ಹಾಕಿದ.

ಶ್ರೀಕೃಷ್ಣಪರಮಾತ್ಮ ಮತ್ತೊಮ್ಮೆ ವೆಂಕಟರಮಣನ ಬಯಕೆಯನ್ನು ಈಡೇರಿಸಿದ, ಚಂಚಲೆಯನ್ನು ಅವನಿಗೆ ಕೊಟ್ಟ. ಭಡ್ತಿಯನ್ನು ಕೊಟ್ಟ. ಪೀಯೋನು ದಾಸಪ್ಪನ ಮಗನನ್ನು ಸ್ಯಾನಿಟರಿ ಇನ್ಸ್‌ಪೆಕ್ಟರ್ ಪಾಂಡುರಂಗರಾಯನ ಅಳಿಯನಾಗಿ ಪರಿವರ್ತಿಸಿದ. ಅಷ್ಟೂ ಅಲ್ಲದೆ ವೆಂಕಟರಮಣನ ವಂಶಾಭಿವೃದ್ಧಿಯನ್ನು ಮಾಡುವ ಅಶ್ವಾಸನೆಯನ್ನೂ ನೀಡಿದ.

*****

ಒಂದು ಸಂಜೆ ಓವರ್‌ಟೈಮಿನ ಕೊನೆಗೆ ಫೈಲನ್ನೆತ್ತಿಕೊಂಡು ವೆಂಕಟರಮಣ ಆಕಸ್ಮಿಕವಾಗಿ ಮ್ಯಾನೇಜರ್ ರೋಡ್ರಿಗ್ಸ್ ಮಹಾಶಯನ ಕೋಣೆಯೊಳ ಹೊಕ್ಕಾಗ, ಚಂಚಲೆಯ ತುಟಿಗಳ ಮೇಲೆ ರೆಸ್ಟ್ ತೆಗೆದುಕೊಳ್ಳುತ್ತಿದ್ದ ಮ್ಯಾನೇಜರ್ ಸಾಹೇಬನ ತುಟಿಗಳು ಫಕ್ಕನೆ ಅಗಲುತ್ತಿರುವುದನ್ನು ಕಂಡ.

'ಶ್ರೀಕೃಷ್ಣಾ, ನೀನು ನನ್ನ ಬಾಳನ್ನು ತೊಳೆ ತೊಳೆದು ಕೊನೆಗೂ ಬೂದಿಯ ಹೊಂಡದಲ್ಲಿ ಎಸೆದೆಯಲ್ಲಾ!' ಅಂದುಕೊಂಡು, ವೆಂಕಟರಮಣ ಸಂಜೆ ಶ್ರೀಕೇಷ್ಣದೇವಾಲಯದ ಮುಂದಿನ ಕೊಳದಲ್ಲಿ ಯಾಂತ್ರಿಕವಾಗಿ ಕಾಲು ತೊಳೆಯುತ್ತಾ ಮರೆವಿನಿಂದ ಬಾಯಿಗೆ ನೀರು ಹಾಕಿಕೊಂಡಾಗ, ಫಕ್ಕನೆ ಗಲೀಜು ನೀರು, ಕೊಳಕು ನೀರು, ಎಂಜಲು ನೀರು ಎಂಬುದು ನೆನಪಾಯಿತು. ತಲೆಯೆತ್ತಿದಾಗ, ಕೊಳದ ಮೂಲೆಯಲ್ಲಿ ಬ್ರಾಹ್ಮಣನೊಬ್ಬ ನೀರಿನಲ್ಲಿ ತನ್ನ ಮಾಸಲು ಪಂಚೆಯನ್ನು ಮುಳುಗಿಸಿ ನೀರಿಗೇ ಹಿಂಡುತ್ತಿರುವುದನ್ನು ಕಂಡು ಬಾಯಿಲ್ಲಿದ್ದ ನೀರನ್ನು ಪಿಸಕ್ಕೆಂದು ಕೊಳಕ್ಕೆ ಉಗುಳಿದ. ಪಾವಟಿಗೆಗಳನ್ನು ಮೇಲೇರುತ್ತಿರುವಾಗ ಮರಳಿ ಶ್ರೀಕೃಷ್ಣನ ನೆನಪಾಗಿ, ರಾಧೆಯ ನೆನಪಾಗಿ, ಮುಖದಲ್ಲಿ ಕಿರುನಗುವೊಂದು ತೇಲಿತು. ಎಲ್ಲಾ ಬರೀ ಎಂಜಲು ಶ್ರೀಕೃಷ್ಣಾ, ನೀನು ಮಾತ್ರವೆ ಏಕೆ, ನೀನು ಕಾಣಿಸಿಕೊಟ್ಟ ಸತ್ಯವೂ ಯುಗಯುಗದಲ್ಲಿ ಮರಳಿ ಮರಳಿ ಎಸ್ಟಾಬ್ಲಿಷ್ ಆಗುತ್ತದೆ' ಅಂದುಕೊಂಡು, ಗಂಧವನ್ನು ಪಡಕೊಂಡು ಹಣೆಗೆ ದಪ್ಪಗೆ ಮೆತ್ತಿಕೊಂಡು ಹೊರಬಂದಾಗ ತಾನು ಕಳಚಿಟ್ಟು ಹೋದ ಅಂಬಾಸಡರ್ ಶೂಗಳು ಮಾಯವಾಗಿ ಅವುಗಳ ಸ್ಥಾನದಲ್ಲಿ ಒಂದು ಜೊತೆ ಹಳೆಯ ರಬ್ಬರ್ ಚಪ್ಪಲಿಗಳನ್ನು ಕಂಡು ಹುಬ್ಬೇರಿಸಿ ನಿಂತ.